

**ಪ್ರೀತಿ** ಎಂಬುದು ಮಾನವನ, ವೈಯಕ್ತಿಕ, ಸಂಕೀರ್ಣ ಮತ್ತು ಸೂಕ್ಷ್ಮ ಅನುಭವ. ಆದರೆ ಇಂದಿನ ಬದಲಾದ ಸಾಮಾಜಿಕ ವ್ಯವಸ್ಥೆಯಲ್ಲಿ ಮತ್ತು ಆಧುನಿಕ ಡೇಟಿಂಗ್ ಯುಗದ ವೇಗದಲ್ಲಿ, ಪ್ರೀತಿ ಮತ್ತು ಕ್ರಿಮಿನಲ್ ಕಾನೂನುಗಳ ನಡುವಿನ ಗಡಿಯು ಹಿಂದೆಂದಿಗಿಂತಲೂ ಹೆಚ್ಚು ಮಸುಕಾಗುತ್ತಿದೆ. ವಿವಾಹದ ಭರವಸೆಯ ನೆಲೆಯಲ್ಲಿ ನಿರ್ಮಾಣವಾದ ಸಂಬಂಧಗಳು ಭಿನ್ನಾಭಿಪ್ರಾಯಗಳಿಂದ ಮುರಿದುಬಿದ್ದಾಗ, ಆ ಮುರಿದ ಮನಸ್ಸುಗಳು ನೇರವಾಗಿ ಪೊಲೀಸ್ ಠಾಣೆಯ ಮೆಟ್ಟಿಲೇರುತ್ತಿರುವುದು ಇಂದಿನ ಆತಂಕಕಾರಿ ವಾಸ್ತವ.

ಎರಡು ಜೀವಗಳ ನಡುವಿನ ಖಾಸಗಿ ಒಡನಾಟ, ಒಪ್ಪಿಗೆಯಿಂದ ಕೂಡಿದ್ದ ದೈಹಿಕ ಸಂಬಂಧಗಳು ಏಕಾಏಕಿ ‘ವಂಚನೆ’ ಅಥವಾ ‘ಸಮ್ಮತಿಯ ತಪ್ಪುಗ್ರಹಿಕೆ’ (Misconception of consent) ಎಂದು ರೂಪಾಂತರಗೊಳ್ಳುತ್ತಿವೆಯೇ ಎಂಬ ಗಂಭೀರ ಪ್ರಶ್ನೆ ಇಂದು ನ್ಯಾಯಾಲಯಗಳ ಕಟಕಟೆಯಲ್ಲಿ ನಿತ್ಯವೂ ಪ್ರತಿಧ್ವನಿಸುತ್ತಿದೆ. ಭಾರತೀಯ ನ್ಯಾಯ ಸಂಹಿತೆ (BNS) ಜಾರಿಗೆ ಬಂದಿರುವ ಈ ಹೊತ್ತಿನಲ್ಲಿ, ಬಿಎನ್‌ಎಸ್‌ನ ಸೆಕ್ಷನ್ 69 ಈ ಸಂಪೂರ್ಣ ಚರ್ಚೆಯ ಕೇಂದ್ರಬಿಂದುವಾಗಿದೆ.

ಉದ್ಯೋಗ, ಬಡ್ತಿ ಅಥವಾ ಮದುವೆಯ ಸುಳ್ಳು ಭರವಸೆ ನೀಡಿ ಮಹಿಳೆಯರನ್ನು ವಂಚಿಸಿ ಲೈಂಗಿಕ ಸಂಪರ್ಕ ಬೆಳೆಸುವುದನ್ನು ಶಿಕ್ಷಿಸಲು ಈ ಸೆಕ್ಷನ್ ಜಾರಿಗೆ ತರಲಾಗಿದೆ. ಆದರೆ ಕಾನೂನಿನ ಕಪ್ಪುಬಿಳುಪು ಅಕ್ಷರಗಳಲ್ಲಿ ಕಾಣುವ ಈ ನಿಯಮ, ಮಾನವನ ಭಾವನೆಗಳ ಬಣ್ಣಗಳೊಂದಿಗೆ ಬೆರೆತಾಗ ಉಂಟಾಗುವ ಗೊಂದಲಗಳು ಅತ್ಯಂತ ಅಪಾಯಕಾರಿಯಾಗಿವೆ. ಒಂದು ಸಂಬಂಧದ ಅಂತ್ಯವನ್ನು, ಅದರ ಆರಂಭದ ಉದ್ದೇಶಕ್ಕೆ ತಳುಕುಹಾಕಿ ‘ಮೋಸ’ ಎಂದು ಹಣೆಪಟ್ಟಿ ಕಟ್ಟುವುದು ಕಾನೂನಿನ ಮೂಲಭೂತ ತತ್ವಗಳಿಗೇ ವಿರುದ್ಧವಾಗಿದೆ ಎಂಬ ಕೂಗು ಕಾನೂನು ವಲಯದಲ್ಲಿ ದಟ್ಟವಾಗುತ್ತಿದೆ.

ಸಂಬಂಧಗಳು ಸ್ವಭಾವತಃ ಅನಿಶ್ಚಿತ; ಅವು ಸಮಯದೊಂದಿಗೆ, ಸಂದರ್ಭಗಳೊಂದಿಗೆ ಬದಲಾಗುತ್ತವೆ, ಗಾಢವಾಗುತ್ತವೆ ಅಥವಾ ನಿರ್ದಾಕ್ಷಿಣ್ಯವಾಗಿ ಮುರಿದುಬೀಳುತ್ತವೆ. ಇಂತಹ ಅನಿಶ್ಚಿತತೆಯನ್ನು ಕ್ರಿಮಿನಲ್ ಅಪರಾಧದ ಭೂತಗನ್ನಡಿಯಿಂದ ನೋಡಲು ಸಾಧ್ಯವೇ ಎಂಬ ಪ್ರಶ್ನೆಗೆ ಸುಪ್ರೀಂ ಕೋರ್ಟ್ ಮತ್ತು ವಿವಿಧ ಹೈಕೋರ್ಟ್‌ಗಳು ನೀಡಿರುವ ತೀರ್ಪುಗಳು ಕಣ್ಣು ತೆರೆಸುವಂತಿವೆ.

ಸುಪ್ರೀಂ ಕೋರ್ಟ್ ಪ್ರಮೋದ್ ಸೂರ್ಯಭಾನ್ ಪವಾರ್ ವಿರುದ್ಧ ಸ್ಟೇಟ್ ಆಫ್ ಮಹಾರಾಷ್ಟ್ರ (2019) ಪ್ರಕರಣದಲ್ಲಿ ನೀಡಿದ ತೀರ್ಪು ಈ ವಿಚಾರದಲ್ಲಿ ಒಂದು ಮೈಲಿಗಲ್ಲು. ‘ಮದುವೆಯಾಗುವ ಸುಳ್ಳು ಭರವಸೆ’ಗೂ (False Promise) ಮತ್ತು ಪ್ರಾಮಾಣಿಕ ಕಾರಣಗಳಿಂದ ‘ಮದುವೆಯಾಗಲು ಸಾಧ್ಯವಾಗದಿರುವುದಕ್ಕೂ’ (Breach of Promise) ಅಜಗಜಾಂತರ ವ್ಯತ್ಯಾಸವಿದೆ ಎಂದು ಸುಪ್ರೀಂ ಕೋರ್ಟ್ ಕಡ್ಡಿಮುರಿದಂತೆ ಹೇಳಿದೆ. ಭರವಸೆ ನೀಡಿದಾಗ ಆ ವ್ಯಕ್ತಿಯ ಉದ್ದೇಶ ಶುದ್ಧವಾಗಿರಬಹುದು, ಆ ಕ್ಷಣದ ಪ್ರೀತಿಗೆ ಆತ ಪ್ರಾಮಾಣಿಕನಾಗಿರಬಹುದು. ಆದರೆ ಕಾಲಕ್ರಮೇಣ ಕೌಟುಂಬಿಕ ವಿರೋಧ, ಜಾತಿಧರ್ಮಗಳ ಸಂಘರ್ಷ, ಜಾತಕಗಳ ದೋಷ, ಆರ್ಥಿಕ ಅಸಮತೋಲನ ಅಥವಾ ಕೇವಲ ಪರಸ್ಪರ ಹೊಂದಾಣಿಕೆಯ ಕೊರತೆಯಿಂದ ಮದುವೆ ಎಂಬ ಮೈಲಿಗಲ್ಲನ್ನು ತಲುಪಲು ಸಾಧ್ಯವಾಗದೇ ಇರಬಹುದು. ಈ ಬದಲಾವಣೆ ಮಾತ್ರದಿಂದಲೇ, ಹಿಂದೊಮ್ಮೆ ನೀಡಿದ್ದ ಭರವಸೆಯನ್ನು ‘ಪೂರ್ವಯೋಜಿತ ವಂಚನೆ’ ಎಂದು ಘೋಷಿಸಲು ಸಾಧ್ಯವಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿದೆ.




ಇದೇ ಸಿದ್ಧಾಂತವನ್ನು ‘ಉದಯ್ ವಿರುದ್ಧ ಸ್ಟೇಟ್ ಆಫ್ ಕರ್ನಾಟಕ’ ಮತ್ತು ‘ಮಹೇಶ್ವರ್ ಟಿಗ್ಗಾ’ ಪ್ರಕರಣಗಳಲ್ಲಿಯೂ ಗಟ್ಟಿಯಾಗಿ ಪ್ರತಿಪಾದಿಸಲಾಗಿದೆ. ವಿವಾಹದ ಭರವಸೆ ಎಂಬುದು ಪ್ರತಿಯೊಂದು ಸಂದರ್ಭದಲ್ಲೂ ಕಾನೂನುಬದ್ಧ ವಾಣಿಜ್ಯ ಒಪ್ಪಂದವಲ್ಲ; ಅದು ಸಂದರ್ಭಾನುಸಾರವಾಗಿ ಬದಲಾಗುವ, ಭಾವನೆಗಳ ಆಧಾರದ ಮೇಲೆ ನಿಂತಿರುವ ಒಂದು ಮಾನವೀಯ ನಿರ್ಧಾರ. ಈ ಸೂಕ್ಷ್ಮವನ್ನು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಇತ್ತೀಚಿನ ಆದೇಶಗಳು ಅತ್ಯಂತ ನಿಖರವಾಗಿ ಬೆಟ್ಟುಮಾಡಿ ತೋರಿಸಿವೆ. ದೀರ್ಘಕಾಲದ ಪ್ರೇಮ, ಪರಸ್ಪರ ಸಮ್ಮತಿಯ ಒಡನಾಟ ಮತ್ತು ಆರಂಭಿಕ ಹಂತದಲ್ಲಿ ಮೋಸದ ಉದ್ದೇಶವಿಲ್ಲದಿರುವುದನ್ನು ಸೂಕ್ಷ್ಮವಾಗಿ ಗಮನಿಸಿ, ಇಂತಹ ಹಲವು ಪ್ರಕರಣಗಳಲ್ಲಿ ಎಫ್‌ಐಆರ್‌ಗಳನ್ನು ರದ್ದುಗೊಳಿಸಿರುವ ಕ್ರಮವು, ಕಾನೂನು ಮತ್ತು ಜೀವನದ ನಡುವಿನ ಗಡಿಯ ಬಗ್ಗೆ ನ್ಯಾಯಾಂಗವು ಸಮಾಜಕ್ಕೆ ನೀಡುತ್ತಿರುವ ಎಚ್ಚರಿಕೆಯ ಸಂದೇಶವಾಗಿದೆ. ದೆಹಲಿ ಮತ್ತು ಬಾಂಬೆ ಹೈಕೋರ್ಟ್‌ಗಳ ದೃಷ್ಟಿಕೋನವೂ ಇದೇ ಕಠಿಣ ಹಾದಿಯಲ್ಲಿ ಸಾಗಿದೆ.

ವರ್ಷಗಟ್ಟಲೆ ಒಟ್ಟಿಗಿದ್ದ, ಪರಸ್ಪರ ಒಪ್ಪಿಗೆಯಿಂದಲೇ ಎಲ್ಲವನ್ನೂ ಹಂಚಿಕೊಂಡ ಇಬ್ಬರು ಪ್ರಾಪ್ತವಯಸ್ಕರು, ಯಾವುದೋ ಹಂತದಲ್ಲಿ ಬೇರೆಯಾಗಲು ನಿರ್ಧರಿಸಿದಾಗ, ಹಿಂದಿನ ಸಮ್ಮತಿಯನ್ನು ಪೂರ್ವಾನ್ವಯವಾಗಿ ರದ್ದುಗೊಳಿಸಿ ಅದನ್ನು ‘ಕ್ರಿಮಿನಲ್ ಮೋಸ’